(KARTET-2017 PAPER-II KM) (MATHS & SCIENCE)

# PART – I

## Language – I

## KANNADA

**ಸೂಚನೆ :** ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು **1** ರಿಂದ **8**ರ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಕನಸು ಬದುಕಿನ ಒಂದು ಅವಿಭಾಜ್ಯ ಅಂಗ. ಅದು ಅನೇಕ ಸಲ ಮನುಷ್ಯನಿಗೆ ವರವಾಗಿ ಪರಿಣಮಿಸಿದೆ. ಅನೇಕ ಕವಿಗಳು ಕನಸಿನ ಬಗೆಗೆ ವಿವಿಧ ರೀತಿಯ ಕಲ್ಪನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಮಾನವ ಮಾನವಾತೀತ ದರ್ಪಣದಂತಹ ಕನಸುಗಳನ್ನು ನಿರ್ಮಿಸಬಲ್ಲ. ಮನುಷ್ಯನ ಕನಸುಗಳಿಗೆ, ಮನುಷ್ಯನ ಪ್ರಾಚೀನತೆಯಷ್ಟೇ ದೀರ್ಘವಾದ ಪರಂಪರೆಯಿದೆ.

ಮನುಷ್ಯನಿಗೆ ಕನಸು ಬೇಕೊ–ಬೇಡವೊ ? ಎಂಬ ಪ್ರಶ್ನೆಗಿಂತ ಎಂತಹ ಕನಸು ಇರಬೇಕೆಂಬುದು ಬಹಳ ಮುಖ್ಯವಾಗುತ್ತದೆ. ಕನಸುಗಳಲ್ಲಿ ಅನೇಕ ರೀತಿಯ ಕನಸುಗಳಿವೆ. ಅವುಗಳಲ್ಲಿ ಮುಖ್ಯವಾಗಿ ವ್ಯಕ್ತಿನಿಷ್ಠ ಕನಸುಗಳು, ಸಮಾಜ ನಿಷ್ಠ ಕನಸುಗಳು– ಎಂದು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ವ್ಯಕ್ತಿನಿಷ್ಠ ಕನಸುಗಳು ಆಯಾ ವ್ಯಕ್ತಿಯ ವೈಯಕ್ತಿಕ ಬದುಕಿನ ಪ್ರತಿಬಿಂಬವಾಗಿ, ಆಶಯವಾಗಿ ನಿಲ್ಲಬಹುದು; ಇಲ್ಲವೆ ಕೇವಲ ಭ್ರಮೆಗಳಾಗಿ ಕಾಡಬಹುದು ಆದರೆ ಸಮಾಜನಿಷ್ಠ ಕನಸುಗಳು ವ್ಯಕ್ತಿ–ಸಮಾಜದ ನಡುವೆ ಗಾಢವಾದ ಸಂಬಂಧವನ್ನು ಬೆಸೆಯುತ್ತವೆ. ಈ ದೇಶದ ಅನೇಕ ಮಹಾವ್ಯಕ್ತಿಗಳು ಈ ದೇಶದ ಬೆಳವಣಿಗೆಗಾಗಿ ಅನೇಕ ರೀತಿಯ ಕನಸುಗಳನ್ನು ಕಂಡಿದ್ದಾರೆ. ಕನಸು–ನನಸಾಗುವವರೆಗೆ ಹೋರಾಡಿದವರ ಒಂದು ಪರಂಪರೆಯೇ ಇದೆ. ಕನಸು ಬದುಕುವ ಭರವಸೆಯನ್ನು ಮೂಡಿಸುತ್ತದೆ. ಜೀವನೋತ್ಸಾಹವನ್ನು ಹೆಚ್ಚಿಸುತ್ತದೆ.

ಬುದ್ಧನ ಕನಸು ಬೋಧಿವೃಕ್ಷದ ಹಸಿರಿನಂತೆ ನಳನಳಿಸಿದರೆ, ಅಶೋಕ ಸಾಮ್ರಾಟನ ಕನಸು ರಣರಂಗದ ರಕ್ತದ ಮಡುವಿನಲ್ಲಿ ಶಾಂತಿ ಬೆಳಕನ್ನು ಕಂಡಿತು. ವಚನಕಾರರ ಕನಸು ಮಾನವೀಯತೆಯನ್ನು ಬೆಳೆಸಿ ಸಮಾನತೆಯನ್ನು ಹುಟ್ಟುಹಾಕಿದರೆ, ಹರಿದಾಸರ ಕನಸು ತ್ಯಾಗದ ಮೂಲಕ ಬದುಕನ್ನು ಗಾಢವಾಗಿ ಪ್ರೀತಿಸಲು ಕಲಿಸಿತು. ಗಾಂಧೀಜಿಯ ಕನಸು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದರೆ, ಅಂಬೇಡ್ಕರ್ ಅವರ ಕನಸು ಈ ದೇಶದ ಜಾತಿ ವ್ಯವಸ್ಥೆಯನ್ನು ಹೊಡೆದೋಡಿಸುವುದಾಗಿತ್ತು. ಕನಸಿನ ಅಧ್ಯಯನವೆಂದರೆ ನಮ್ಮ ಸಾಂಸ್ಕೃತಿಕ ಬದುಕಿನ ಅಧ್ಯಯನವೇ ಆಗಿದೆ. ಮನುಷ್ಯನ ಆದರ್ಶ ಮತ್ತು ವಾಸ್ತವಗಳ ನಡುವೆ ಕನಸು ಕೊಂಡಿಯ ಹಾಗೆ ಇರುತ್ತದೆ. ರಾಜ–ಮಹಾರಾಜರ ಕನಸುಗಳೇ ವಿಜೃಂಭಿಸುವ ಈ ದೇಶದ ಚರಿತ್ರೆಯಲ್ಲಿ ಸಾಮಾನ್ಯ ಜನತೆಯ ಕನಸುಗಳಿಗೂ ಸ್ಥಾನ ಸಿಗಲೇಬೇಕಾಗಿದೆ.

ದೇಶದ ಬಗೆಗೆ, ಸಮಾಜದ ಬಗೆಗೆ ಚಿಂತಿಸುವವರಿಗೆ ಯಾವಾಗಲೂ ಉದಾತ್ತವಾದ ಕನಸುಗಳೇ ಬೀಳುತ್ತವೆ. ಕೇವಲ ತಮ್ಮ ವ್ಯಕ್ತಿಗತ ಬದುಕಿನ ಬಗೆಗೆ ಆಲೋಚಿಸುವವರಿಗೆ, ತಮ್ಮ ವಾಸ್ತವದಲ್ಲಿ ಸಿಗದ ಅನೇಕ ಸಂಭ್ರಮಗಳು ಕನಸಿನಲ್ಲಿ ಕಾಣಿಸಿಕೊಳ್ಳುತ್ತವೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲಿಯೂ ವಂಚಿತನಾದ ಸಾಮಾನ್ಯನೊಬ್ಬ ತನ್ನ ಕನಸಿನ ಮೂಲಕವೇ ಬದುಕಬೇಕಾಗುತ್ತದೆ. ಕನ್ನಡದಲ್ಲಿರುವ 'ತಿರುಕನ ಕನಸು' ಹಾಡು ಕೂಡ ಇದನ್ನೇ ಧ್ವನಿಸುತ್ತದೆ.

1. ರಣರಂಗದ ರಕ್ತದ ಮಡುವಿನಲ್ಲಿ ಶಾಂತಿಯ ಬೆಳಕನ್ನು ಕಾಣುವ ಕನಸು ಕಂಡವರು

   (1) ಹರ್ಷವರ್ಧನ (2) ಅಶೋಕ

   (3) ಲಕ್ಷ್ಮೀಬಾಯಿ (4) ಒನಕೆ ಓಬವ್ವ



Use E-Papers, Save Trees
above line hide when print out

**2.** ಮಾನವೀಯತೆ ಮತ್ತು ಸಮಾನತೆಯನ್ನು ಹುಟ್ಟು ಹಾಕಿದವರು

(1) ಯೋಧರು
(2) ವಿಜ್ಞಾನಿಗಳು
(3) ಸಮಾಜ ಸುಧಾರಕರು
(4) ವಚನಕಾರರು

**3.** ತ್ಯಾಗದ ಮೂಲಕ ಬದುಕನ್ನು ಆಳವಾಗಿ ಪ್ರೀತಿಸಲು ಕಲಿಸಿದವರು

(1) ಭಕ್ತಿಪಂಥದವರು
(2) ಸ್ವಾತಂತ್ರ್ಯ ಹೋರಾಟಗಾರರು
(3) ಹರಿದಾಸರು
(4) ಬ್ರಹ್ಮಸಮಾಜದವರು

**4.** ಜಾತಿ ವ್ಯವಸ್ಥೆಯನ್ನು ಹೊರಹಾಕಲು ದೊಡ್ಡ ಕನಸು ಕಂಡಿದ್ದ ಮಹನೀಯರು

(1) ಅಂಬೇಡ್ಕರವರು
(2) ವಲ್ಲಭಭಾಯಿ ಪಟೇಲ್
(3) ಗೋಪಾಲಕೃಷ್ಣ ಗೋಖಲೆ
(4) ಮಹಾತ್ಮ ಗಾಂಧೀಜಿ

**5.** ಭಾರತ ದೇಶದ ಮಹಾವ್ಯಕ್ತಿಗಳು ಈ ಉದ್ದೇಶಕ್ಕಾಗಿ ಕನಸುಗಳನ್ನು ಕಂಡಿದ್ದರು

(1) ಧರ್ಮಸಂಸ್ಥಾಪನೆಗಾಗಿ
(2) ದೇಶದ ಅಭಿವೃದ್ಧಿಗಾಗಿ
(3) ಸಂಪತ್ತಿನ ಸಂಗ್ರಹಕ್ಕಾಗಿ
(4) ಭಾವೈಕ್ಯತೆಗಾಗಿ

**6.** ಮನುಷ್ಯನ ಆದರ್ಶ ಮತ್ತು ವಾಸ್ತವಗಳ ಮಧ್ಯೆ ಕೊಂಡಿಯಾಗಿರುವುದು

(1) ಬೆಳಕು
(2) ಸಿದ್ಧಾಂತಗಳು
(3) ಪರಿಶ್ರಮ
(4) ಕನಸು

**7.** ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಜ್ಞಾನದ ಜೊತೆಗೆ ಜೀವನೋತ್ಸವವನ್ನು ಬೆಳೆಸುತ್ತದೆ. ಗೆರೆ ಎಳೆದಿರುವ ಪದದಲ್ಲಿ ಆಗಿರುವ ಸಂಧಿ

(1) ಗುಣಸಂಧಿ
(2) ಸವರ್ಣದೀರ್ಘಸಂಧಿ
(3) ಯಣ್‌ಸಂಧಿ
(4) ಆದೇಶಸಂಧಿ

**8.** ಕೆಳಗಿನವುಗಳಲ್ಲಿ ಸರಿಯಾದ ಪದರೂಪ

(1) ಜಾತ್ಯಾತೀತತೆ
(2) ಜಾತ್ಯತೀತತೆ
(3) ಜಾತ್ಯಾ ಅತೀತತೆ
(4) ಜಾತೆ ಅತೀತತೆ



Use E-Papers, Save Trees
above line hide when print out

**ಸೂಚನೆ :** ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು **9** ರಿಂದ **15**ರ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ನೋಡು ಇದೋ ಇಲ್ಲರಳಿ ನಗುತಿದೆ
ಏಳುಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರ ಗಿಡದಿಂ-
ದೆಂತು ಮೂಡಿತೊ ಬೆಳ್ಳಗೆ !

ಸತ್ವಶೀಲನ ಧ್ಯಾನಮೌನವೆ
ಅರಳಿ ಬಂದೊಲು ತೋರಿದೆ
ಒಲವು ತುಂಬಿದ ಮುಗುದೆಯೆದೆಯಿಂ
ದೊಗೆದ ನಲ್ನುಡಿಯಂತಿದೆ

ಎನಿತು ನವುರಾಗಿಹವು ದಳಗಳು
ಹಸುಳೆ ಕಾಣುವ ಕನಸೊಲು !
ಏನು ಇಂಪಿನ ಕಂಪು ಇದರದು
ಆ ಮಹಾತ್ಮರ ಮನದೊಲು

ಹರಿವ ಮನವನು ಹಿಡಿದು ಒಂದೆಡೆ
ನಿಲಿಸಿ ತೊಳೆದಿದೆ ಹೂವಿದು
ಚೆಲುವು ಬಾಳನು ಹಸನುಗೊಳಿಸುವ
ಅಚ್ಚರಿಯ ಪರಿ ಎಂಥದು !

9. ಅರಳಿ ನಿಂತ ಮಲ್ಲಿಗೆಯು ತೋರುವ ಭಾವ
   (1) ಹಸುರಾಗಿ (2) ನಗುವಾಗಿ (3) ಮೌನವಾಗಿ (4) ಧ್ಯಾನದಿಂದಾಗಿ

10. ಹಚ್ಚನೆ ಹಸುರಿನ ಗಿಡದಲ್ಲಿ ಬೆಳ್ಳಗೆ ಮೂಡಿದ ಹೂವು
    (1) ಸಂಪಿಗೆ (2) ಗುಲಾಬಿ (3) ಮಲ್ಲಿಗೆ (4) ಸೇವಂತಿಗೆ

11. ಕವಿಯ ಭಾವದಲಿ ಮಲ್ಲಿಗೆ ಹೂವು ಇರುವ ರೀತಿ
    (1) ಮುಗ್ಧ ಎದೆಯಿಂದ ಬರುವ ಚಲುವಾದ ನುಡಿ (2) ಶೂನ್ಯಾಕಾಶದಲ್ಲಿರುವ ತಾರೆಯಂತೆ
    (3) ಹಿಮಾಲಯದ ಹಿಮಮಣಿಗಳಂತೆ (4) ತಾಯಿ ಎದೆಯಿಂದ ಮೂಡುವ ವಾತ್ಸಲ್ಯದಂತೆ

12. ಅರಳಿದ ಹೂವಿನ ದಳಗಳು ಇಂಪು ಕಂಪಾಗಿ ಕಾಣುವುದು ಇದರ ಕನಸಿನಲ್ಲಿ
    (1) ಮಗುವಿನಲ್ಲಿ (2) ತೊಟ್ಟಿಲಿನಲ್ಲಿ (3) ಆಕಾಶದಲ್ಲಿ (4) ಭೂಮಿಯಲ್ಲಿ

13. ಹರಿಯುವ ಮನಸ್ಸನ್ನು ನಿಲ್ಲಿಸಿ ತೊಳೆದಿರುವುದು
    (1) ಭಾನು (2) ಭುವಿ (3) ಹೂವು (4) ಮೌನ



Use E-Papers, Save Trees
above line hide when print out

14. ಮಹಾತ್ಮ ಎಂಬ ಪದವನ್ನು ಬಿಡಿಸಿದಾಗ ಆಗುವ ಸಂಧಿ
(1) ಗುಣಸಂಧಿ
(2) ಸವರ್ಣದೀರ್ಘಸಂಧಿ
(3) ವೃದ್ಧಿಸಂಧಿ
(4) ಯಣ್‌ಸಂಧಿ

15. 'ಅಚ್ಚರಿ' ಎಂಬ ಪದದ ತತ್ಸಮ ರೂಪ
(1) ಅಚ್ಚರ
(2) ಆಶ್ಚರ್ಯ
(3) ಅನಾಶ್ಚರ್ಯ
(4) ಆಚ್ಚರಿ

16. ಉತ್ತಮ ಮೌಖಿಕ ಅಭಿವ್ಯಕ್ತಿ ಕೌಶಲಕ್ಕೆ ವ್ಯತಿರಿಕ್ತವಾದದು
(1) ಧ್ವನಿ ಏರಿಳಿತಗಳು
(2) ಹಿಮ್ಮರಳುವಿಕೆ
(3) ಸ್ಪಷ್ಟ ಉಚ್ಚಾರ
(4) ನಿಲುಗಡೆ ಪಾಲನೆ

17. ವಿದ್ಯಾರ್ಥಿಯ ಉಗ್ಗುವಿಕೆ ಮತ್ತು ತೊದಲುವಿಕೆಗೆ ಮುಖ್ಯ ಕಾರಣ
(1) ಪದ ಸಂಪತ್ತಿನ ಕೊರತೆ
(2) ಸಾಂದರ್ಭಿಕ ಪದಗಳನ್ನು ಬಳಸದಿರುವುದು
(3) ಧ್ವನ್ಯಂಗಗಳಲ್ಲಿ ಕಂಡುಬರುವ ದೋಷಗಳು
(4) ವಚನ, ಕಾಲ, ಲಿಂಗಗಳನ್ನು ಗಮನಿಸದೆ ಇರುವುದು

18. ಉತ್ತಮ ಮಾತುಗಾರಿಕೆಯ ಲಕ್ಷಣಗಳಲ್ಲಿ ಇದು ಅನಪೇಕ್ಷಿತ ಲಕ್ಷಣ
(1) ಉದ್ದೇಶಪೂರ್ವಕವಾಗಿ ಮಾನಸಿಕ ಸಿದ್ಧತೆಯಿಂದ ಮಾತನಾಡುವುದು
(2) ಮಾತಿನಲ್ಲಿ ಪದೇ ಪದೇ ಹಿಮ್ಮರಳುವಿಕೆ ಇರುವುದು
(3) ನಿರರ್ಗಳವಾಗಿ, ಭಾವಪೂರ್ಣವಾಗಿ ಮಾತನಾಡುವುದು
(4) ಧ್ವನಿ ಏರಿಳಿತ ಮತ್ತು ನಿಲುಗಡೆಯನ್ನು ಅನುಸರಿಸಿ ಮಾತನಾಡುವುದು

19. ಧ್ವನಿ ಮತ್ತು ಮಾನಸಿಕ ಕ್ರಿಯೆಯನ್ನು ಬಿಂಬಿಸುವ ಭಾಷಾ ಕೌಶಲ
(1) ಬರವಣಿಗೆ ಕೌಶಲ
(2) ಆಲಿಸುವಿಕೆಯ ಕೌಶಲ
(3) ಅರ್ಥಗ್ರಹಿಸುವ ಕೌಶಲ
(4) ಓದುಗಾರಿಕೆಯ ಕೌಶಲ

20. "ಕ್ರಮವಾದ ಬರವಣಿಗೆಯನ್ನು ಕಲಿಸುವ ಮುಂಚೆ ಚಿತ್ರಗಳನ್ನು ಬರೆಯುವುದನ್ನು ಕಲಿಯಿರಿ". ಎಂದು ಹೇಳಿದವರು
(1) ರವೀಂದ್ರನಾಥ ಠಾಗೋರ
(2) ಮರಿಯ ಮಾಂಟಿಸೋರಿ
(3) ಮಹಾತ್ಮ ಗಾಂಧೀಜಿ
(4) ಪೆಡ್ರಿಕ್ ಫ್ರೊಬೆಲ್

21. ಮಾತು, ಓದು ಮತ್ತು ಬರಹ ಉತ್ತಮವಾಗಬೇಕಾದರೆ ಈ ಕೌಶಲ ಬಲಗೊಳ್ಳಬೇಕು
(1) ನೋಡಿ ಬರೆಯುವುದು
(2) ವಾಕ್ಯರಚನೆ
(3) ಕೇಳಿ ಬರೆಯುವುದು
(4) ಕಾಪಿ ಬರೆಯುವುದು

22. ಇದು ಭಾಷಾ ಕೌಶಲಗಳಲ್ಲಿ ಶಾಶ್ವತ ರೂಪ
(1) ಆಲಿಸುವಿಕೆ
(2) ಮಾತುಗಾರಿಕೆ
(3) ಓದುಗಾರಿಕೆ
(4) ಬರವಣಿಗೆ



Use E-Papers, Save Trees
above line hide when print out

23. ಕನ್ನಡದಲ್ಲಿ ಉತ್ತಮ ಕೈಬರಹದ ಲಕ್ಷಣಗಳಿಗೆ ವ್ಯತಿರಿಕ್ತವಾಗಿರುವುದು
    (1) ಅಕ್ಷರಗಳು ಸಮಗಾತ್ರದಲ್ಲಿರುವುದು
    (2) ಅಕ್ಷರ ಜೋಡಣೆ ಮುತ್ತು ಪೋಣಿಸಿದಂತಿರಬೇಕು
    (3) ಅಕ್ಷರಗಳು ಸುಸ್ಪಷ್ಟವಾಗಿರಬೇಕು
    (4) ಅಕ್ಷರ ಮತ್ತು ಪದಗಳ ನಡುವೆ ಜಾಗ ಬಿಡದೆ ಬರೆಯಬೇಕು

24. ಮೂರ್ತದಿಂದ ಅಮೂರ್ತದ ಕಡೆಗೆ ಮತ್ತು ನಿರ್ದಿಷ್ಟದಿಂದ ಸಾಮಾನ್ಯದ ಕಡೆಗೆ ಸಾಗುವ ಬೋಧನಾ ಪದ್ಧತಿ
    (1) ನಿಗಮನ ಪದ್ಧತಿ
    (2) ಅನುಗಮನ ಪದ್ಧತಿ
    (3) ನಿಯಮ ಪರಿಪಾಲನಾ ಪದ್ಧತಿ
    (4) ಸಂಪೂರ್ಣ ಪದ್ಧತಿ

25. ವ್ಯಾಕರಣ ಬೋಧನೆಯ ಸಂದರ್ಭದಲ್ಲಿ ಅನ್ವಯವಾಗದಿರುವ ಚಟುವಟಿಕೆ
    (1) ಸಮರ್ಪಕವಾಗಿ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯುವುದು
    (2) ವರ್ಣಗಳ ವಿನ್ಯಾಸ ಗುರುತಿಸಿ, ಕಾಗುಣಿತದ ಸ್ಪಷ್ಟ ಅರಿವನ್ನು ಮಾಡಿಸುವುದು
    (3) ವ್ಯಾಕರಣ ನಿಯಮಗಳನ್ನು ಕಂಠಪಾಠ ಮಾಡಿಸುವುದು
    (4) ಸುಸಂಬದ್ಧ ರಚನೆ ಮತ್ತು ಪ್ರಯೋಗವನ್ನು ಅಭ್ಯಾಸ ಮಾಡಿಸುವುದು

26. ವಿದ್ಯಾರ್ಥಿಯ ಕಲಿಕಾ ದೌರ್ಬಲ್ಯಗಳನ್ನು ನಿಖರವಾಗಿ ಪತ್ತೆಹಚ್ಚಲು ಕೈಗೊಳ್ಳುವ ಪರೀಕ್ಷೆ
    (1) ಸಾಧನೆಯ ಪರೀಕ್ಷೆ
    (2) ಪ್ರಮಾಣಕ ಪರೀಕ್ಷೆ
    (3) ಬುದ್ಧಿಶಕ್ತಿ ಪರೀಕ್ಷೆ
    (4) ನೈದಾನಿಕ ಪರೀಕ್ಷೆ

27. ವಿದ್ಯಾರ್ಥಿಗಳ ಓದುಗಾರಿಕೆ ಕೌಶಲದ ಕಲಿಕೆ ಹಾಗೂ ಅಭ್ಯಾಸಕ್ಕೆ ನೆರವಾಗುವ ಸಾಧನಗಳು
    (1) ಕಥೆಪುಸ್ತಕಗಳು ಮತ್ತು ದಿನಪತ್ರಿಕೆಗಳು
    (2) ಕಂಪ್ಯೂಟರ್ ಮತ್ತು ದೂರದರ್ಶನ
    (3) ಪ್ರಬಂಧ ಮತ್ತು ಪ್ರಶ್ನೋತ್ತರ ರಚನೆ
    (4) ಸಂಪನ್ಮೂಲ ಪುಸ್ತಕ ಮತ್ತು ಅಭ್ಯಾಸ ಪುಸ್ತಕ

28. ಹಿಂದೆ ಜರುಗಿದ ಘಟನೆಗಳನ್ನು ಮಾತ್ರವಲ್ಲದೆ ವರ್ತಮಾನದ ಹಾಗೂ ಭವಿಷ್ಯದ ಘಟನೆಗಳನ್ನು ಒಳಗೊಂಡಿರುವ ಪಠ್ಯಪುಸ್ತಕ ಈ ತತ್ವವನ್ನು ಪ್ರತಿಬಿಂಬಿಸುತ್ತದೆ.
    (1) ಶಿಶುಕೇಂದ್ರಿತ ತತ್ವ
    (2) ಚಟುವಟಿಕೆ ಕೇಂದ್ರಿತ ತತ್ವ
    (3) ಚಾರಿತ್ರಿಕ ತತ್ವ
    (4) ಸಮಕಾಲೀನ ತತ್ವ

29. ಸುಮಧುರ ಗೀತೆಗಳು, ಕವಿಗಳ ಭಾಷಣಗಳು ಮತ್ತು ಸಂದರ್ಶನಗಳನ್ನು ತರಗತಿಯಲ್ಲಿ ಆಲಿಸಲು ಬಳಸಬಹುದಾದ ಸಂಪನ್ಮೂಲ ಸಾಧನ
    (1) ಬಾನುಲಿ
    (2) ಧ್ವನಿಸುರುಳಿ
    (3) ಶಿರೋನ್ನತ ಪ್ರಕ್ಷೇಪ
    (4) ಚಿತ್ರಪಟಗಳು

30. ಭಾಷಾ ತರಗತಿಯಲ್ಲಿ ಒತ್ತು ನೀಡಬೇಕಾಗಿರುವುದು
    (1) ಭಾಷಾಶುದ್ಧತೆ
    (2) ವ್ಯಾಕರಣ ಬದ್ಧ ಪ್ರಯೋಗಕ್ಕೆ
    (3) ಸಹಜ ಸಂವಹನ ಮತ್ತು ಅಭಿವ್ಯಕ್ತಿಗೆ
    (4) ವಿಷಯ ಗ್ರಹಿಕೆಗೆ



Use E-Papers, Save Trees
above line hide when print out

## Language – II

## ENGLISH

Read the given passage and answer the questions **(Q.Nos. 31-37)** that follow by selecting the most appropriate option.

The morning after my teacher came she led me into her room and gave me a doll. The little blind children at the Perkin's Institution had sent it and Laura Bridgman had dressed it. When I had played with it a little while, Miss Sullivan slowly spelled into my hand the word "d-o-l-l". I was interested at once in this finger play and tried to imitate it. When I finally succeeded in making the letters correctly I was flushed with childish pleasure and pride. Running downstairs to my mother I held up my hand and made the letters for doll. In the days that followed, I learned to spell a great many words.

One day, Miss Sullivan had tried to impress it upon me that "m-u-g" is mug and that "w-a-t-e-r" is water, but I persisted in confounding the two. In despair she had dropped the subject for the time, only to renew it at the first opportunity.

As we walked to the well-house, we saw someone drawing water and my teacher placed my hand under the spout. As the cool stream gushed over one, hand she spelled it the other the word water'. Suddenly, I felt a misty consciousness as of something forgotten- a thrill of returning thought; and somehow the mystery of language was revealed to me. I knew then that "w-a-t-e-r" meant the wonderful cool something that was flowing over my hand. That living word awakened my soul, gave it light, hope, joy, set it free ! There were barriers still, it is true, but barriers that could in time by swept away (No. of words –275.)

**31.** The main idea of this passage is to

(1) discover Helen Keller's likes and dislikes

(2) find out about Helen Keller's education

(3) compare Helen Keller's teaching style with Miss Sullivan

(4) understand how easily Helen Keller learned sign language

**32.** "Miss Sullivan had tried to impress it upon me that ..... confounding the two". The meaning of the word 'impress' here is to

(1) force or command someone to do something

(2) affect or influence significantly

(3) appear impressive

(4) apply pressure on

**33.** Helen Keller had a conflict with Miss Sullivan because she

(1) wanted Miss Sullivan to let her play

(2) could not follow Miss Sullivan's rules

(3) would not go outside with Miss Sullivan

(4) was frustrated by Miss Sullivan's lessons



www.InyaTrust.com

Use E-Papers, Save Trees
above line hide when print out

**34.** My teacher came and led me into her room. The apt question tag is

(1) didn't she ? (2) did she not ? (3) did she ? (4) doesn't she ?

**35.** "There were barriers still, it is true, but barriers that could in time be swept away." The above sentence expresses

(1) hostility (2) regret (3) hope (4) concern

**36.** "I was flushed with childish pleasures and pride". Choose the correct active form of the given sentence.

(1) Childish pleasure and pride flush me
(2) Childish pleasure and pride flushed me
(3) I am flushed with childish pleasure and pride
(4) Childish pleasure and pride was flushed by me

**37.** "Suddenly I felt a misty consciousness as of something forgotten – a thrill of returning thought; and somehow the mystery of language was revealed to me." According to these lines, the mystery that was revealed to Helen Keller was

(1) the idea that learning involves remembering facts
(2) the knowledge that teachers want their pupils to learn
(3) the acceptance that it takes time for students to master their lessons
(4) the awareness that there is a relationship between words and objects

Read the given poem and answer the questions (Q.Nos. **38–45**) that follow by selecting the most appropriate option.

Let me not to the marriage of true minds
Admit impediments. Love is not love
Which alters when it alteration finds,
Or bends with the remover to remove,
O no ! it is an ever-fixed mark.
That looks on tempests and is never shaken;
It is the star to every wand' ring bark,
Whose worth's unknown, although his height be taken
Love's not Time's fool, though rosy lips and cheeks
Within his bending sickle's compass come;
Love alters not with his brief hours and weeks,
But bears it out even to the edge of doom.
If this be error and upon me prov'd,
I never writ, nor no man ever lov'd.

**38.** 'It is an ever- fixed mark' The figure of speech used here is

(1) simile (2) metaphor (3) hyperbole (4) personification



www.InyaTrust.com

Use E-Papers, Save Trees
above line hide when print out

**39.** In the lines 'love alters not ... edge of doom'. The poet believes that true love is

(1) timeless (2) strong

(3) constant (4) measurable

**40.** The word 'impediments' in the poem means

(1) hindrances (2) lies (3) fears (4) mistakes

**41.** The Poets' tone is identified to be

(1) disrespectful (2) critical (3) adamant (4) smitten

**42.** In line I, 'marriage' actually means

(1) disunion (2) alliance (3) blend (4) separation

**43.** The central idea of the poem is to

(1) disprove that love exists

(2) argue that love conquers all

(3) explain why two people fall in love

(4) show that true love won't change inspite of any obstacle

**44.** The poets idea of love involves the premise that

(1) true love ends when circumstances turn for the worse

(2) people must be close in age to be truly in love

(3) real love brings a person money, fame and respect

(4) true love is indifferent to wealth, beauty, age and circumstance

**45.** The given poem is

(1) an elegy (2) a ballad (3) a sonnet (4) an ode

Answer the questions **46** to **60** by selecting the most appropriate option :

**46.** Students in a class are asked to repeat the teacher's model of pronunciation. The kind of drill involved here is

(1) chain drill (2) repetition drill

(3) substitution drill (4) question and answer drill

www.InyaTrust.com



Use E-Papers, Save Trees
above line hide when print out

**47.** 'I apologize for my behaviour in the meeting Yesterday' This is an example of

(1) language function
(2) evaluative function
(3) linguistic function
(4) phonetic function

**48.** 'Brainstorming techniques' can be used to develop

(1) reading comprehension
(2) oral comprehension
(3) written expression
(4) pronunciation skills

**49.** The phonetic transcription for the word 'police' is

(1) |pɔ: li : s|
(2) |puli : s|
(3) |p ɔlis|
(4) |pəli : s|

**50.** 'The Correlation method' is a method for teaching

(1) poetry
(2) grammar
(3) drama
(4) vocabulary

**51.** One of the objectives of using mother tongue in the language class is to

(1) develop students' quick comprehension
(2) understand students' love for the language
(3) motivate students to learn the language
(4) estimate the student's capacity to learn the language

**52.** One of the important features of teaching English through communicative approach is to

(1) emphasise on the teacher's language ability
(2) develop tasks among pupils
(3) take care of the rules of language
(4) emphasise and develop skills through mother tongue

**53.** A test that is conducted at the end of a language course is

(1) achievement test
(2) diagnostic test
(3) placement test
(4) proficiency test

**54.** One of the important aims of teaching poetry is to

(1) utilize leisure time
(2) encourage the student to play different roles
(3) develop the skill of appreciation for poetic expressions
(4) develop language abilities



www.InyaTrust.com

Use E-Papers, Save Trees
above line hide when print out

**55.** One of the techniques used in the audio-lingual method of teaching is

(1) substitution drill
(2) dialogue memorization
(3) speaking
(4) listening

**56.** Teaching prescriptive grammar is not encouraged at the school level as

(1) it doesn't help in speaking error free English
(2) it creates awareness about the difficulty in learning the language
(3) teachers don't approve of it
(4) mere memorization doesn't help in mastering of the language

**57.** One of the objectives of teaching prose is to

(1) develop a scientific attitude towards language
(2) develop insight into the structure of English language
(3) develop students mental abilities of reasoning and correct observation
(4) develop active and passive vocabularies in students

**58.** Communicative competence is the

(1) ability to apply grammatical rules of a language to form correct sentences and use them appropriately
(2) understanding of a foreign language as spoken by the natives
(3) extent to which one can learn a language to communicate ideas
(4) ability to express oneself through emotions only

**59.** Mother tongue can be used in teaching of English to

(1) enrich vocabulary
(2) promote quick comprehension
(3) make learning easy
(4) help teacher to complete portion

**60.** 'Total Physical Response' is a language teaching method developed by

(1) George Lozanov
(2) Caleb Gattegno
(3) Charles Curran
(4) J.J. Asher

www.InyaTrust.com



Use E-Papers, Save Trees
above line hide when print out

# PART – III

## CHILD DEVELOPMENT AND PEDAGOGY

61. ಸುಮಳು ಪ್ರತಿ ಪಾಠವನ್ನು ಚುರುಕಾಗಿ ಕಲಿಯುವಳು, ಆದರೆ ಲೀಲಳು ಅದೇ ಪಾಠ ಕಲಿಯಲು ಹೆಚ್ಚು ಸಮಯ ತೆಗೆದುಕೊಳ್ಳುವಳು. ಇದು ವಿಕಾಸದ ಈ ತತ್ವವನ್ನು ಪ್ರತಿಬಿಂಬಿಸುತ್ತದೆ.

(1) ನಿರಂತರತೆ
(2) ಸಾಮಾನ್ಯತೆಯಿಂದ ನಿರ್ದಿಷ್ಟತೆಗೆ
(3) ವೈಯಕ್ತಿಕ ಭಿನ್ನತೆ
(4) ಪರಸ್ಪರ ಸಂಬಂಧ

62. ವ್ಯಕ್ತಿಯಲ್ಲಿ ಸಂಘರ್ಷವನ್ನುಂಟುಮಾಡುವ ಆಲೋಚನೆಗಳನ್ನು ಮನಸ್ಸಿನ ಜಾಗೃತ ಭಾಗದಿಂದ ಅಜಾಗೃತ ಭಾಗಕ್ಕೆ ತಳ್ಳಲ್ಪಡುವ ಪ್ರಕ್ರಿಯೆಯೇ

(1) ಪ್ರಕ್ಷೇಪಣೆ
(2) ದಮನ
(3) ಹಿಮ್ಮರುಳುವಿಕೆ
(4) ತರ್ಕ ಸಮ್ಮತವಾಗಿಸುವಿಕೆ

63. ಈ ಕೆಳಗಿನ ಯಾವುದು ಸಮೂಹದ ಲಕ್ಷಣವಲ್ಲ ?

(1) ಹಲವು ಸದಸ್ಯರಿಂದ ಕೂಡಿದ ಒಂದು ಸಾಮಾಜಿಕ ಘಟಕ
(2) ತನ್ನದೇ ಆದ ನಾಯಕತ್ವ ನಮೂನೆ
(3) ಸಮೂಹದ ಸದಸ್ಯರು ಸಮಾನ ಗುರಿ ಹೊಂದಿರುತ್ತಾರೆ
(4) ಪ್ರತಿಯೊಬ್ಬ ಸದಸ್ಯನು ನಿರ್ದಿಷ್ಟ ಪಾತ್ರ ನಿರ್ವಹಿಸುವುದಿಲ್ಲ

64. ಈ ರೀತಿಯ ಉಭಯಸಂಕಟದಲ್ಲಿ ಎರಡೂ ಆಯ್ಕೆಗಳು ಉತ್ತಮ ಆಯ್ಕೆಯಾಗಿರುತ್ತವೆ

(1) ಆಗಮ – ಆಗಮ ದ್ವಂದ್ವ
(2) ಆಗಮ – ಅಪಗಮ ದ್ವಂದ್ವ
(3) ಅಪಗಮ – ಅಪಗಮ ದ್ವಂದ್ವ
(4) ಆಗಮ – ಅಪಗಮದ್ವಯ ದ್ವಂದ್ವ

65. ಕೋಹ್ಲಬರ್ಗ್‌ರವರ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಗಳಾದ ಆಲೋಚನೆ ಮತ್ತು ತಾರ್ಕಿಕತೆ ಮಗುವಿನ ಈ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ

(1) ದೈಹಿಕ ವಿಕಾಸ
(2) ಬೌದ್ಧಿಕ ವಿಕಾಸ
(3) ನೈತಿಕ ವಿಕಾಸ
(4) ಸಾಮಾಜಿಕ ವಿಕಾಸ

66. ಜೀನ್ ಪಿಯಾಜೆರವರ ಪ್ರಕಾರ ಮಗುವು ಗಾತ್ರ ಮತ್ತು ವಸ್ತುವಿನ ಆಕಾರಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುವ ಹಂತ

(1) ಸಂವೇದನಾ ಗತಿ ಹಂತ
(2) ಕಾರ್ಯಪೂರ್ವ ಹಂತ
(3) ಮೂರ್ತ ಕಾರ್ಯಗಳ ಹಂತ
(4) ಔಪಚಾರಿಕ ಕಾರ್ಯಗಳ ಹಂತ

www.InyaTrust.com



Use E-Papers, Save Trees
above line hide when print out

**67.** ಕಲಿಕೆಯ ಸಾಮಾಜಿಕ ಸಂರಚನಾವಾದವನ್ನು ಮಂಡಿಸಿದವರು

(1) ವೈಗೋಟ್‌ಸ್ಕಿ
(2) ಜೆರೋಮ್ ಬ್ರೂನರ್
(3) ಬಂಡೂರ
(4) ಗ್ಯಾನೆ

**68.** ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು

(1) ಬಂಡೂರ
(2) ಕೋಲ್‌ಬರ್ಗ್
(3) ಬ್ರೂನರ್
(4) ಗ್ಯಾನೆ

**69.** ಇವುಗಳಲ್ಲಿ ಯಾವುದು ಸಮಂಜಸತೆಯ ಅರ್ಥವನ್ನು ಕೊಡುತ್ತದೆ ?

(1) ಪರೀಕ್ಷೆಯು ಅಳತೆ ಮಾಡಬೇಕಾದುದನ್ನೆ ಅಳೆದರೆ
(2) ಪರೀಕ್ಷೆಯ ಅಳತೆಯಲ್ಲಿ ಸ್ಥಿರತೆಯನ್ನು ತೋರುವಿಕೆ
(3) ಅಳತೆಯನ್ನು ಸುಲಭವಾಗಿ ಮಾಡುವಿಕೆ
(4) ಮತ್ತೆ ಮತ್ತೆ ಅಳೆದಾಗ ಅಳತೆಯಲ್ಲಿ ವ್ಯತ್ಯಾಸ ತೋರುವಿಕೆ

**70.** ವಿದ್ಯಾರ್ಥಿಗಳ ಬಲಗಳು ಮತ್ತು ನ್ಯೂನತೆಗಳನ್ನು ಪತ್ತೆಹಚ್ಚಲು ಬಳಸುವ ಪರೀಕ್ಷೆ

(1) ಪ್ರಮಾಣಬದ್ಧಗೊಳಿಸಿದ ಪರೀಕ್ಷೆ
(2) ಕ್ಲಿನಿಕಲ್ ಪರೀಕ್ಷೆ
(3) ಸಾಧನಾ ಪರೀಕ್ಷೆ
(4) ನೈದಾನಿಕ ಪರೀಕ್ಷೆ

**71.** ಒಂದು ಆರು ವರ್ಷ ಮಾನಸಿಕ ವಯಸ್ಸುಳ್ಳ ಮಗುವು ನಾಲ್ಕು ವರ್ಷ ವಯಸ್ಸಿನ ಮಗುವಾಗಿದ್ದರೆ, ಅವನನ್ನು ನಾವು ಹೀಗೆಂದು ಕರೆಯಬಹುದು

(1) ಸಾಧಾರಣಕ್ಕಿಂತ ಮೇಲ್ಪಟ್ಟ
(2) ಸಾಧಾರಣ
(3) ಪ್ರತಿಭಾವಂತ
(4) ದಡ್ಡ

**72.** ಬ್ಲೂಮ್‌ನ ಪರಿಷ್ಕೃತ ಬೋಧನಾ ಉದ್ದೇಶದ ವರ್ಗೀಕರಣದ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಯ ಅತ್ಯುನ್ನತ ಹಂತವು

(1) ಅರ್ಥಮಾಡಿಕೊಳ್ಳುವುದು
(2) ಮೌಲ್ಯಮಾಪನ
(3) ಸೃಷ್ಟಿಸುವುದು
(4) ಸಂಶ್ಲೇಷಿಸುವುದು

**73.** ಬಹುಮುಖ ಬುದ್ಧಿಶಕ್ತಿ ಸಿದ್ಧಾಂತದ ಪ್ರಕಾರ ಎಲ್ಲಾ ರೀತಿಯ ಪ್ರಾಣಿಗಳನ್ನು, ಲವಣಗಳನ್ನು ಮತ್ತು ಸಸ್ಯಗಳನ್ನು ಗುರುತಿಸುವ ಹಾಗೂ ವರ್ಗೀಕರಿಸುವ ಸಾಮರ್ಥ್ಯವನ್ನು ಹೀಗೆ ಕರೆಯುವರು

(1) ನೈಸರ್ಗಿಕ ಬುದ್ಧಿಶಕ್ತಿ
(2) ಶಾಬ್ದಿಕ ಭಾಷಾ ಬುದ್ಧಿಶಕ್ತಿ
(3) ಅಂತರ್ ವ್ಯಕ್ತ ಬುದ್ಧಿಶಕ್ತಿ
(4) ತಾರ್ಕಿಕ ಗಣಿತೀಯ ಬುದ್ಧಿಶಕ್ತಿ

**74.** ವಿಷಯ ಸಂಜ್ಞಾನ ಪರೀಕ್ಷೆಯು ಅಳೆಯುವುದು

(1) ಮನೋವೃತ್ತಿ
(2) ವ್ಯಕ್ತಿತ್ವ
(3) ಸೃಜನಶೀಲತೆ
(4) ಬುದ್ಧಿಶಕ್ತಿ



www.InyaTrust.com

Use E-Papers, Save Trees
above line hide when print out

75. ಬುದ್ಧಿಶಕ್ತಿ ಕಾರ್ಯನಿರ್ವಹಣಾ ಪರೀಕ್ಷೆಯು ಈ ಸಾಮರ್ಥ್ಯವನ್ನು ಅಳೆಯುತ್ತದೆ

(1) ಸಂಖ್ಯೆ ಸಂಬಂಧ
(2) ಭಾಷೆ
(3) ಸೃಜನಶೀಲತೆ
(4) ಕೈಚಳಕ

76. ತರುಣರ ಸಾಮಾಜಿಕ ಬೆಳವಣಿಗೆಗೆ ಉದಾಹರಣೆ ಎಂದರೆ

(1) ಸಾಹಸ ಪ್ರವೃತ್ತಿ
(2) ಬೆಳವಣಿಗೆಯ ಬುಗ್ಗೆ
(3) ಗುಂಪು ರಚನೆ
(4) ವಿಮರ್ಶಾತ್ಮಕ ಸಾಮರ್ಥ್ಯ

77. ನ್ಯೂನತೆಯುಳ್ಳ ಮಕ್ಕಳಿಗಾಗಿ ಇರುವ ಕೇಂದ್ರೀಯ ನಿಯೋಜಿತ ಸಮಗ್ರ ಶಿಕ್ಷಣದ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಇಲ್ಲಿ ನೀಡುವ ಗುರಿ ಹೊಂದಿದೆ

(1) ಸಾಮಾನ್ಯ ಶಾಲೆಗಳು
(2) ವಿಶೇಷ ಶಾಲೆಗಳು
(3) ಮುಕ್ತ ಶಾಲೆಗಳು
(4) ಅಂಧ ಪರಿಹಾರ ಸಂಘ ಶಾಲೆಗಳು

78. ಸೃಜನಶೀಲತೆಯು ಸಾಮಾನ್ಯವಾಗಿ ಇದಕ್ಕೆ ಸಂಬಂಧಿಸಿದೆ

(1) ಏಕಮುಖ ಚಿಂತನೆ
(2) ಬಹುಮುಖ ಚಿಂತನೆ
(3) ಮಾದರೀಕರಣ
(4) ಅನುಕರಣೆ

79. ಪರಿಣಾಮಕಾರಿ ಸಮನ್ವಯತೆಯು ಕೆಳಗಿನ ಒಂದನ್ನು ಬಿಟ್ಟು ಉಳಿದವನ್ನೊಳಗೊಂಡಿದೆ

(1) ಸಾಮರ್ಥ್ಯ ಬೆಳವಣಿಗೆ
(2) ಸೂಕ್ಷ್ಮಗ್ರಾಹೀಕರಣ
(3) ಪ್ರತ್ಯೇಕಿಸುವುದು
(4) ಪೋಷಕರನ್ನೊಳಗೊಳ್ಳುವುದು

80. ಡಿಸ್‌ಗ್ರಾಫಿಯಾವು ಮುಖ್ಯವಾಗಿ ಇದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನೊಳಗೊಂಡಿದೆ

(1) ಮಾತನಾಡುವುದು
(2) ಮಾತನಾಡುವುದು ಮತ್ತು ಕೇಳಿಸಿಕೊಳ್ಳುವುದು
(3) ಬರವಣಿಗೆ
(4) ಓದುವುದು

81. ಆಶ್ರಿತ ಮಾನಸಿಕ ನ್ಯೂನತೆಯುಳ್ಳ ಮಕ್ಕಳ ಬುದ್ಧಿಶಕ್ತಿ ಸೂಚ್ಯಾಂಕವು

(1) 90 – 109 (2) 20 – 25 (3) 80 – 85 (4) 30 – 35

82. ವೀಕ್ಷಣಾ ಕಲಿಕೆಯಲ್ಲಿನ ಅನುಸರಿಸಬೇಕಾದ ಹಂತಗಳ ಅನುಕ್ರಮವು

(1) ಕಾರ್ಯನಿರ್ವಹಣೆ, ಪರಿಣಾಮಗಳು, ಅರ್ಜನೆ, ಧಾರಣೆ
(2) ಧಾರಣೆ, ಅರ್ಜನೆ, ಪರಿಣಾಮಗಳು, ಕಾರ್ಯನಿರ್ವಹಣೆ
(3) ಪರಿಣಾಮಗಳು, ಕಾರ್ಯನಿರ್ವಹಣೆ, ಧಾರಣೆ, ಅರ್ಜನೆ
(4) ಅರ್ಜನೆ, ಧಾರಣೆ, ಕಾರ್ಯನಿರ್ವಹಣೆ, ಪರಿಣಾಮಗಳು



www.InyaTrust.com

Use E-Papers, Save Trees
above line hide when print out

83. ಪರಿಕಲ್ಪನೆಗಳ ಬೆಳವಣಿಗೆಯು ಮೂಲತಃ ಇದರ ಅಂಗವಾಗಿದೆ

(1) ಭಾವನಾತ್ಮಕ ಬೆಳವಣಿಗೆ
(2) ಬೌದ್ಧಿಕ ಬೆಳವಣಿಗೆ
(3) ಶಾರೀರಿಕ ಬೆಳವಣಿಗೆ
(4) ಸಾಮಾಜಿಕ ಬೆಳವಣಿಗೆ

84. ಪೂರ್ವಕಲಿಕೆಯು ಹೊಸ ಸನ್ನಿವೇಶದ ಕಲಿಕೆಯಲ್ಲಿ ಯಾವ ರೀತಿಯ ವ್ಯತ್ಯಾಸವನ್ನು ಮಾಡದಿದ್ದರೆ, ಅದನ್ನು ಹೀಗೆನ್ನಬಹುದು

(1) ಧನಾತ್ಮಕ ಕಲಿಕೆಯ ವರ್ಗಾವಣೆ
(2) ಋಣಾತ್ಮಕ ಕಲಿಕೆಯ ವರ್ಗಾವಣೆ
(3) ಶೂನ್ಯ ಕಲಿಕೆಯ ವರ್ಗಾವಣೆ
(4) ಪಾರ್ಶ್ವ ವರ್ಗಾವಣೆ

85. ಗ್ಯಾನೆಯವರ ಪ್ರಕಾರ ಉನ್ನತ ಮಟ್ಟದ ಕಲಿಕೆಯು

(1) ಸಮಸ್ಯೆ ಪರಿಹಾರ
(2) ಪರಿಕಲ್ಪನೆಗಳ ಕಲಿಕೆ
(3) ಸರಪಳಿ
(4) ನಿಯಮ ಕಲಿಕೆ

86. ಪರಿಕಲ್ಪನಾ ಸಾಧನೆ ಮಾದರಿಯನ್ನು ಪ್ರತಿಪಾದಿಸಿದವರು

(1) ಬಂಡೂರ
(2) ಬ್ರೂನರ್
(3) ಗ್ಯಾನೆ
(4) ಕೋಲ್‌ಬರ್ಗ್

87. ಹಿಂದೆ ಕಲಿತದ್ದನ್ನು ಧಾರಣೆಸಿ, ಪುನಃ ಸ್ಮರಣೆಗೆ ತರುವುದೇ

(1) ವಿಸ್ಮೃತಿ
(2) ಅಭಿಪ್ರೇರಣೆ
(3) ಸ್ಮೃತಿ
(4) ಅವಧಾನ

88. ಆರ್ಕಿಮಿಡೀಸನು "ಯುರೇಕಾ !" ಎಂದು ಕೂಗುತ್ತಾ ಓಡಿಬಂದನು. ಇದರಲ್ಲಿ ಯಾವ ವಿಧದ ಕಲಿಕೆಯು ಅಡಗಿದೆ ?

(1) ವೀಕ್ಷಣಾ ಕಲಿಕೆ
(2) ಯತ್ನ – ದೋಷ ಕಲಿಕೆ
(3) ಅನುಬಂಧ ಕಲಿಕೆ
(4) ಒಳನೋಟ ಕಲಿಕೆ

89. ಕಾರ್ಯಕ್ರಮಾನ್ವಯ ಕಲಿಕೆಯು ಆಧರಿಸಿರುವುದು

(1) ಕ್ರಿಯಾಜನ್ಯ ಅನುಬಂಧ
(2) ಯತ್ನ – ದೋಷ ಕಲಿಕೆ
(3) ಒಳನೋಟ ಕಲಿಕೆ
(4) ಶಾಸ್ತ್ರೀಯ ಅನುಬಂಧ

90. ಈ ಕೆಳಗಿನ ಯಾವುದು ಕ್ರಿಯಾ ಸಂಶೋಧಕನನ್ನು ಕ್ರಿಯಾಯೋಜನೆಗೆ ನಿರ್ದೇಶಿಸುತ್ತದೆ ?

(1) ಸಂಭವನೀಯ ಕಾರಣಗಳ ವಿಶ್ಲೇಷಣೆ
(2) ಕ್ರಿಯಾಪ್ರಾಕಲ್ಪನೆಯನ್ನು ನಿರೂಪಿಸುವುದು
(3) ಪೂರ್ವ ಪರೀಕ್ಷಾದತ್ತದ ವಿಶ್ಲೇಷಣೆ
(4) ಸಮಸ್ಯೆಯನ್ನು ನಿರ್ದಿಷ್ಟಗೊಳಿಸುವುದು



www.InyaTrust.com
Use E-Papers, Save Trees
above line hide when print out

# PART – IV

## MATHEMATICS AND SCIENCE

**91.** ಯಾವ ನಾಲ್ಕು ಅಂಕಿಯ ದೊಡ್ಡ ಸಂಖ್ಯೆಯನ್ನು 88 ರಿಂದ ಸಂಪೂರ್ಣವಾಗಿ ಭಾಗಿಸಬಹುದು ?

(1) 8888 (2) 9988 (3) 9768 (4) 9944

**92.** 40 ಕ್ಕಿಂತ ಕಡಿಮೆ ಇರುವ ಅವಿಭಾಜ್ಯ ಸಂಖ್ಯೆಗಳು ಎಷ್ಟು ?

(1) 11 (2) 12 (3) 13 (4) 14


**93.** A ಮತ್ತು B ನ ಬೆಲೆ ಏನು ?

| | | | |
|---|---|---|---|
| | 2 | A | B |
| + | A | B | 1 |
| | B | 1 | 8 |

(1) 7 ಮತ್ತು 3 (2) 3 ಮತ್ತು 7

(3) 4 ಮತ್ತು 7 (4) 7 ಮತ್ತು 4

**94.** ಕೆಳಗೆ ಕೊಟ್ಟಿರುವ ಚಿತ್ರವು ಯಾವ ಗಣಿತೀಯ ಕ್ರಿಯೆಯನ್ನು ಸೂಚಿಸುತ್ತದೆ ?




(1) $4 + (-7) + 5$ (2) $-3 + (4) + 2$

(3) $4 + (7) + 2$ (4) $3 + (-7) + 5$

(SPACE FOR ROUGH WORK)



www.InyaTrust.com

Use E-Papers, Save Trees
above line hide when print out

**95.** ಕುಮಾರನು ಸೋಮವಾರ $1\frac{1}{2}$ ಗಂಟೆಗಳು, ಮಂಗಳವಾರ $5\frac{1}{5}$ ಗಂಟೆಗಳು ಮತ್ತು ಬುಧವಾರ 4 ಗಂಟೆಗಳ ಕಾಲ ಕೆಲಸ ಮಾಡುತ್ತಾನೆ. ಇದರ ಒಟ್ಟು ಸಮಯದಲ್ಲಿ $\frac{1}{3}$ ಗಂಟೆಗಳನ್ನು ಅಂತರಜಾಲ ಶೋಧಕ್ಕೆ ವಿನಿಯೋಗಿಸುತ್ತಾನೆ. ಅವನು ಅಂತರಜಾಲ ಶೋಧಕ್ಕೆ ವಿನಿಯೋಗಿಸಿದ ಸಮಯ ಎಷ್ಟು ?

(1) $7\frac{2}{10}$ ಗಂಟೆಗಳು
(2) $5\frac{2}{30}$ ಗಂಟೆಗಳು
(3) $8\frac{11}{10}$ ಗಂಟೆಗಳು
(4) $3\frac{17}{30}$ ಗಂಟೆಗಳು

**96.** 60 ವಿದ್ಯಾರ್ಥಿಗಳಿರುವ ತರಗತಿಯಲ್ಲಿ, $\frac{1}{4}$ ರಷ್ಟು ವಿದ್ಯಾರ್ಥಿಗಳು ವಿಜ್ಞಾನವನ್ನು ಅಭ್ಯಾಸ ಮಾಡಲು, $\frac{2}{3}$ ರಷ್ಟು ವಿದ್ಯಾರ್ಥಿಗಳು ಆಂಗ್ಲ ಭಾಷೆಯನ್ನು ಅಭ್ಯಾಸ ಮಾಡಲು ಮತ್ತು ಇನ್ನುಳಿದ ವಿದ್ಯಾರ್ಥಿಗಳು ಗಣಿತವನ್ನು ಅಭ್ಯಾಸ ಮಾಡಲು ಇಷ್ಟಪಡುತ್ತಾರೆ. ಒಟ್ಟು ವಿದ್ಯಾರ್ಥಿಗಳಲ್ಲಿ ಗಣಿತವನ್ನು ಅಭ್ಯಾಸ ಮಾಡಲು ಇಷ್ಟಪಡುವ ವಿದ್ಯಾರ್ಥಿಗಳ ಭಾಗ ಎಷ್ಟು ?

(1) $\frac{1}{12}$
(2) $\frac{1}{10}$
(3) $\frac{3}{20}$
(4) $\frac{1}{15}$

**97.** ಸಮೀಕರಣ $2x^3 - x^2 - px - 2 = 0$ ಗೆ $(x - 2)$ ಅಪವರ್ತನವಾಗಿದೆ. ‘p’ ನ ಬೆಲೆ ಏನು ?

(1) 3
(2) 4
(3) 5
(4) 0

**98.** $5x^2 - 6x + 7 = 0$ ಸಮೀಕರಣದ ಮೂಲ ಸ್ವರೂಪ ಏನು ?

(1) ಪೂರ್ಣ ವರ್ಗ
(2) ವಾಸ್ತವ ಮತ್ತು ಅಸಮ
(3) ವಾಸ್ತವ ಮತ್ತು ಸಮ
(4) ಕಲ್ಪಿತ

**(SPACE FOR ROUGH WORK)**



www.hiyaTrust.com
Use E-Papers, Save Trees
above line hide when print out


**99.** 2A : 3B ಮತ್ತು 4B : 5C ಆದರೆ, A : C ಯು

(1) 5 : 6 (2) 15 : 8 (3) 6 : 5 (4) 8 : 15

**100.** ಒಂದು ರೇಖೆಯ ಉದ್ದವು 0.5 ಮೀಟರ್ ಆಗಿದೆ. ಅದನ್ನು ಎರಡು ಭಾಗಗಳಾಗಿ ವಿಭಜಿಸಿದಾಗ ಮೊದಲನೇ ಭಾಗವು ಎರಡನೇ ಭಾಗದ $\frac{2}{3}$ ರಷ್ಟು ಆಗಿರುತ್ತದೆ. ಎರಡನೇ ಭಾಗದ ಉದ್ದ ಎಷ್ಟು ?

(1) 10 ಸೆಂ.ಮೀ. (2) 20 ಸೆಂ.ಮೀ. (3) 30 ಸೆಂ.ಮೀ. (4) 40 ಸೆಂ.ಮೀ.

**101.** ಕೊಟ್ಟಿರುವ ರೇಖಾಚಿತ್ರದಲ್ಲಿ 'x' ನ ಬೆಲೆ ಏನು ?




(1) 30° (2) 60° (3) 90° (4) 40°

**102.** 6 ಸೆಂ.ಮೀ. ಮತ್ತು 8 ಸೆಂ.ಮೀ. ಬಾಹುಗಳುಳ್ಳ ಒಂದು ಆಯತವನ್ನು ಒಂದು ವೃತ್ತವು ಪರಿವೃತ್ತಿಸಿದೆ. ವೃತ್ತದ ಪರಿಧಿ ಎಷ್ಟು ?

(1) 30.5 ಸೆಂ.ಮೀ. (2) 31.4 ಸೆಂ.ಮೀ.

(3) 32.5 ಸೆಂ.ಮೀ. (4) 29.4 ಸೆಂ.ಮೀ.

**103.** ಒಂದು ನಿಯಮಿತ ಪಂಚಭುಜಾಕೃತಿಯಲ್ಲಿ ಎಷ್ಟು ಸಮರೂಪತೆಯ ರೇಖೆಗಳಿವೆ ?

(1) 4 (2) 5 (3) 6 (4) 7

**(SPACE FOR ROUGH WORK)**



www.InyaTrust.com

Use E-Papers, Save Trees
above line hide when print out

104. ಜುಲೈನ ಮೊದಲ 30 ದಿನಗಳಲ್ಲಿ ಸರಾಸರಿ ಮಳೆಯ ಪ್ರಮಾಣವು 1.5 ಮಿ.ಮೀ. ಆಗಿತ್ತು. ಜುಲೈ 31 ರಂದು ಹೆಚ್ಚು ಮಳೆಯು ಬಿದ್ದುದ್ದರಿಂದ ಆ ತಿಂಗಳಿನ ದಿನದ ಮಳೆಯ ಸರಾಸರಿಯು 2 ಮಿ.ಮೀ. ಆಗಿತ್ತು. ಜುಲೈ 31 ರಂದು ಬಿದ್ದ ಮಳೆಯ ಪ್ರಮಾಣ ಎಷ್ಟು ?

(1) 14 ಮಿ.ಮೀ. (2) 15 ಮಿ.ಮೀ. (3) 16 ಮಿ.ಮೀ. (4) 17 ಮಿ.ಮೀ.

105. ಒಂದು ತರಗತಿಯಲ್ಲಿ, 40% ವಿದ್ಯಾರ್ಥಿಗಳು ಕನ್ನಡವನ್ನು, 25% ವಿದ್ಯಾರ್ಥಿಗಳು ಸಂಸ್ಕೃತವನ್ನು ಮತ್ತು 10% ಎರಡನ್ನೂ ಬಯಸುತ್ತಾರೆ. ಒಬ್ಬ ವಿದ್ಯಾರ್ಥಿಯನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಂಡರೆ, ಅವನು ಕನ್ನಡ ಅಥವಾ ಸಂಸ್ಕೃತವನ್ನು ಬಯಸುವ ಸಂಭವನೀಯತೆ ಎಷ್ಟು ?

(1) $\frac{20}{11}$ (2) $\frac{20}{10}$ (3) $\frac{11}{20}$ (4) $\frac{10}{20}$

106. 8 ಬಾಹುಗಳುಳ್ಳ ಬಹುಭುಜಾಕೃತಿಯ ಒಂದು ಕೋನವು 65° ಇದ್ದು ಮತ್ತು ಇನ್ನುಳಿದ ಕೋನಗಳು ಸಮವಾಗಿರುತ್ತವೆ. ಪ್ರತಿಯೊಂದು ಸಮಕೋನದ ಅಳತೆ ಎಷ್ಟು ?

(1) 130° (2) 135° (3) 140° (4) 145°

107. 10 ಸೆಂ.ಮೀ. ವ್ಯಾಸವಿರುವ ಒಂದು ಅರ್ಧವೃತ್ತಾಕಾರದ ತಟ್ಟೆಯ ಪರಿಧಿ ಎಷ್ಟು ?

(1) 26.7 ಸೆಂ.ಮೀ. (2) 25.7 ಸೆಂ.ಮೀ. (3) 24.7 ಸೆಂ.ಮೀ. (4) 15.7 ಸೆಂ.ಮೀ.

108. ಕೆಳಗೆ ಕೊಟ್ಟಿರುವ ದತ್ತಾಂಶಗಳಿಗೆ ಕ್ಷೇತ್ರದ ವಿಸ್ತೀರ್ಣ ಎಷ್ಟು ?

| | G ಗೆ | |
|---|---|---|
| H ಗೆ 40 | 120<br>100<br>60<br>30 | 30 F ಗೆ<br><br>50 B ಗೆ |
| | A ಯಿಂದ | |

(1) 6250 ಯೂನಿಟ್ಸ್ (2) 6500 ಯೂನಿಟ್ಸ್

(3) 6750 ಯೂನಿಟ್ಸ್ (4) 7000 ಯೂನಿಟ್ಸ್

(SPACE FOR ROUGH WORK)



www.InyaTrust.com

Use E-Papers, Save Trees
above line hide when print out

**109.** 10 ಸೆಂ. ಮೀ. ವ್ಯಾಸವಿರುವ ಅರ್ಧಗೋಳಾಕಾರದ ಬಟ್ಟಲಿನಲ್ಲಿ ಎಷ್ಟು ಲೀಟರ್‌ಗಳ ನೀರನ್ನು ಹಿಡಿದಿಡಬಹುದು ?

(1) 0.16 ಲೀಟರ್‌ಗಳು
(2) 0.26 ಲೀಟರ್‌ಗಳು
(3) 0.36 ಲೀಟರ್‌ಗಳು
(4) 0.46 ಲೀಟರ್‌ಗಳು

**110.** ಒಂದು ಸಿಲಿಂಡರ್‌ನ ತ್ರಿಜ್ಯ 7 ಸೆಂ.ಮೀ. ಮತ್ತು ಒಟ್ಟು ಮೇಲ್ಮೈ ವಿಸ್ತೀರ್ಣ 968 ಸೆಂ.ಮೀ. ಸಿಲಿಂಡರ್‌ನ ಎತ್ತರ ಎಷ್ಟು ?

(1) 14 ಸೆಂ.ಮೀ.
(2) 15 ಸೆಂ.ಮೀ.
(3) 22 ಸೆಂ.ಮೀ.
(4) 29 ಸೆಂ.ಮೀ.

**111.** ಒಂದು ಪ್ರತಿಪಾದನೆಯ ಸತ್ಯಾಂಶವನ್ನು ಸ್ಥಾಪಿಸುವ ಪದ್ಧತಿಗೆ ಏನೆಂದು ಕರೆಯುತ್ತೇವೆ ?

(1) ಸ್ವೀಕೃತ ಸಿದ್ಧಾಂತ ಪದ್ಧತಿ
(2) ಸ್ವಯಂಸಿದ್ಧ ಪದ್ಧತಿ
(3) ತಾರ್ಕಿಕ ಸಾಧನೆ ಪದ್ಧತಿ
(4) ನೇರ ಸಾಧನೆ ಪದ್ಧತಿ

**112.** ಯಾವ ಭಾರತೀಯ ಗಣಿತಜ್ಞ ' $\pi$ ' ಬೆಲೆಯನ್ನು ನೀಡಿದನು ?

(1) ಆರ್ಯಭಟ್ಟ
(2) ಭಾಸ್ಕರ – I
(3) ಭಾಸ್ಕರ – II
(4) ರಾಮಾನುಜನ್

**113.** ಯಾವ ಪಠ್ಯಕ್ರಮ ವಿಧಾನದಲ್ಲಿ ವಿದ್ಯಾರ್ಥಿಗಳ ಪರಿಪಕ್ವತೆಯ ಹಂತಗಳನ್ನು ಹಾಗೂ ವಿಷಯದ ಕಠಿಣತೆಯನ್ನು ಪರಿಗಣಿಸಲಾಗುತ್ತದೆ ?

(1) ಸುರಳಿ ವಿಧಾನ
(2) ಏಕಕೇಂದ್ರೀಯ ವಿಧಾನ
(3) ಅಧ್ಯಾಯ ವಿಧಾನ
(4) ತಾರ್ಕಿಕ ವಿಧಾನ

**114.** ಪರಿಹಾರಾತ್ಮಕ ಕ್ರಿಯೆಗಳಿಗೆ ಸೂಕ್ತವಾದ ಯೋಜನೆಯನ್ನು ರೂಪಿಸಲು ಯಾವ ವಿಧದ ಮೌಲ್ಯಮಾಪನವು ಆಧಾರವಾಗುತ್ತದೆ ?

(1) ನೈದಾನಿಕ
(2) ರೂಪಣಾತ್ಮಕ
(3) ಸಂಕಲನಾತ್ಮಕ
(4) ಭವಿಷ್ಯಾತ್ಮಕ

**(SPACE FOR ROUGH WORK)**

www.InyaTrust.com



Use E-Papers, Save Trees
above line hide when print out

**115.** ಕೆಳಗಿನವುಗಳಲ್ಲಿ ಯಾವುದು ಸಂಕಲನಾತ್ಮಕ ಮೌಲ್ಯಮಾಪನದ ಔಪಚಾರಿಕ ತಂತ್ರವಾಗಿದೆ ?

(1) ಹಿಮ್ಮಾಯಿತಿ
(2) ಪರೀಕ್ಷೆಗಳು
(3) ವೀಕ್ಷಣೆಗಳು
(4) ಚರ್ಚೆಗಳು

**116.** ವಿದ್ಯಾರ್ಥಿಗಳ ಕಲಿಕೆಯನ್ನು ಮೌಲ್ಯಮಾಪನ ಮಾಡಲು ಲಿಖಿತ ಮಾರ್ಗದರ್ಶನ ನೀಡುವ ಪದ್ಧತಿ ಯಾವುದು ?

(1) ಕಾರ್ಯಯೋಜನೆಗಳು
(2) ತಾಳೆಪಟ್ಟಿಗಳು
(3) ಯೋಜನೆಗಳು
(4) ರೂಬ್ರಿಕ್‌ಗಳು

**117.** ''ಗಣಿತದ ಭಾಷೆಯಿಂದ ದೇವರು ವಿಶ್ವವನ್ನು ಬರೆದಿರುವನು'' ಈ ಹೇಳಿಕೆಯನ್ನು ನೀಡಿದವರು

(1) ರಸ್ಸೆಲ್
(2) ಹಾರ್ಡಿ
(3) ಯೂಲರ್
(4) ಗೇಲಿಲಿಯೋ

**118.** ''ದಿನನಿತ್ಯ ಜೀವನದಲ್ಲಿ ಗಣಿತ ''ವನ್ನು ಬೋಧಿಸುವಾಗ ಗಣಿತ ಶಿಕ್ಷಕನು ಸ್ಥಳೀಯ ಬ್ಯಾಂಕ್‌ಗೆ ಭೇಟಿ ನೀಡಲು ಏರ್ಪಡಿಸಿದನು. ಯಾವ ವಿಧದ ಕಲಿಕಾ ಸಂಪನ್ಮೂಲವನ್ನು ಶಿಕ್ಷಕರು ಬಳಸಿದರು ?

(1) ಮೂರ್ತರೂಪ ಕಲಿಕಾ ಸಂಪನ್ಮೂಲ
(2) ಸಮುದಾಯದ ಸಂಪನ್ಮೂಲಗಳು
(3) ಚಟುವಟಿಕೆಯ ಸಂಪನ್ಮೂಲಗಳು
(4) ನೈಜ ಜೀವನದ ಸನ್ನಿವೇಶಗಳು

**119.** ಕೆಳಗಿನವುಗಳಲ್ಲಿ ಯಾವುದು ನಿರಂತರ ಸಮಗ್ರ ಮೌಲ್ಯಮಾಪನದ ಪ್ರಕಾರ ಒಂದು ದೃಷ್ಟಿಕೋನದ ಬದಲಾವಣೆ ಅಲ್ಲ ?

(1) ಕಂಠಪಾಠದಿಂದ ಭಾಗವಹಿಸುವ ಕಲಿಕೆ ಕಡೆಗೆ
(2) ಕಲಿಕಾ ಪ್ರಕ್ರಿಯೆಯಿಂದ ಕಲಿಕಾ ಫಲದ ಕಡೆಗೆ
(3) ಉತ್ಪನ್ನದಿಂದ ಪ್ರಕ್ರಿಯೆ ಕಲಿಕೆ ಕಡೆಗೆ
(4) ಪಾಂಡಿತ್ಯ ಮತ್ತು ಸಹಪಾಂಡಿತ್ಯಗಳೆರಡು

**120.** ಗಣಿತದ ಸ್ವಭಾವವು

(1) ಕಲ್ಪನೆ ಮತ್ತು ಒಳಜ್ಞಾನ
(2) ನಿಯತಕ್ರಮ ಮತ್ತು ಅಭ್ಯಾಸ
(3) ಉಪಯುಕ್ತತೆ ಮತ್ತು ಪ್ರಾಯೋಗಿಕತೆ
(4) ಮಾಹಿತಿ ಸಂಸ್ಕರಣೆ

**(SPACE FOR ROUGH WORK)**

www.InyaTrust.com



Use E-Papers, Save Trees
above line hide when print out

121. ''ಬಲೂನುಗಳು, ಚಳಿಗಾಲಕ್ಕಿಂತ ಬೇಸಿಗೆಯಲ್ಲಿ ಹೆಚ್ಚಾಗಿ ಒಡೆಯುತ್ತವೆ''. ಇದನ್ನು ವಿವರಿಸುವ ನಿಯಮ

(1) ಬಾಯ್ಲ್‌ನ ನಿಯಮ
(2) ಗ್ರಹಾಮ್ ವಿಸರಣಾ ನಿಯಮ
(3) ಚಾರ್ಲ್ಸ್‌ನ ನಿಯಮ
(4) ಗೇ ಲೂಸಾಕ್‌ನ ನಿಯಮ

122. ''ಶ್ರವಣಾತೀತ ತರಂಗಗಳನ್ನು ಕೃತಕ ಉಪಗ್ರಹಗಳ ಜಾಡು ಹಿಡಿಯಲು ಬಳಸುವುದಿಲ್ಲ'' ಕಾರಣ ಅವು

(1) ಕೃತಕ ಉಪಗ್ರಹಗಳ ಕಾರ್ಯಕ್ಕೆ ಅಡ್ಡಿಪಡಿಸುತ್ತವೆ
(2) ವಸ್ತು ಮಾಧ್ಯಮದಲ್ಲಿ ಮಾತ್ರ ಪ್ರಸರಿಸುತ್ತವೆ
(3) ನಿರ್ವಾತದಲ್ಲಿ ಮಾತ್ರ ಪ್ರಸರಿಸುತ್ತವೆ
(4) ಚಲಿಸುವ ಮಾಧ್ಯಮದಲ್ಲಿ ಶಕ್ತಿ ಬಿಡುಗಡೆ ಮಾಡಲು ಅಸಫಲವಾಗುತ್ತವೆ

123. ದ್ರವ್ಯಾಂತರಣ ಎಂದರೆ

(1) ನ್ಯೂಕ್ಲಿಯರ್ ಸಂಯುಕ್ತಗಳ ಉತ್ಪಾದನೆ
(2) ಹೊಸ ಮಿಶ್ರಣಗಳ ಉತ್ಪಾದನೆ
(3) ಐಸೋಟೋಪುಗಳ ಉತ್ಪಾದನೆ
(4) ಎಲೆಕ್ಟ್ರಾನುಗಳ ಉತ್ಪಾದನೆ

124. ನ್ಯೂಕ್ಲಿಯರ್ ಕ್ರಿಯಾಕಾರಿಯ ಕ್ರಾಂತಿ ಸ್ಥಿತಿಯನ್ನು ಕಾಪಾಡಲು ಬಳಸುವುದು

(1) ತಂಪುಕಾರಿ
(2) ಪ್ರತಿಫಲಕ
(3) ಮಂದಕಾರಿ
(4) ನಿಯಂತ್ರಣ ಸರಳು

125. ಒಂದು ನೀಳ ತರಂಗದ ತರಂಗದೂರ 1 cm ಮತ್ತು ಗಾಳಿಯಲ್ಲಿ ಅದರ ವೇಗ 330 $ms^{-1}$ . ಈ ತರಂಗದ ಆವರ್ತಕ ಸಂಖ್ಯೆ

(1) $33 \times 10^{-1}$ Hz
(2) $33 \times 10$ Hz
(3) $33 \times 10^{2}$ Hz
(4) $33 \times 10^{3}$ Hz

126. ದ್ಯುತಿ ತಂತು ಸಂಪರ್ಕಗಳಲ್ಲಿ ಬಳಸುವ ಡೈಯೋಡ್

(1) ಬೆಳಕು ಉತ್ಸರ್ಜಕ ಡೈಯೋಡ್
(2) ಝೀನರ್ ಡೈಯೋಡ್
(3) ದ್ಯುತಿ ಡೈಯೋಡ್
(4) ಲೇಸರ್ ಡೈಯೋಡ್

**(SPACE FOR ROUGH WORK)**



www.InyaTrust.com

Use E-Papers, Save Trees
above line hide when print out

127. ಮೂಲ ಮತ್ತು ಪ್ರತಿಫಲಿತ ಧ್ವನಿಗಳ ನಡುವೆ ಇರುವ ಈ ಅಂಶದಿಂದ 'ಪ್ರತಿಧ್ವನಿ' ಉಂಟಾಗುತ್ತದೆ

(1) ಕಾಲಾಂತರ 0.2 ಸೆಕೆಂಡ್ ಇದ್ದಾಗ
(2) ಅಂತರ ಗರಿಷ್ಠ 17 ಮೀಟರ್ ಇದ್ದಾಗ
(3) ಒರಟಾದ, ಎತ್ತರದ ಮೇಲ್ಮೈ ಇದ್ದಾಗ
(4) ಶಬ್ದದ ವೇಗ 340 $ms^{-1}$ ಗಿಂತ ಹೆಚ್ಚಾಗಿದ್ದಾಗ

128. ಈ ಕಾರಣದಿಂದ ವಿದ್ಯುತ್ ಬಲ್ಬ್‌ಗಳಲ್ಲಿ ಟಂಗಸ್ಟನ್ ತಂತು ಬಳಸುತ್ತಾರೆ

(1) ಅಧಿಕ ರೋಧ ಮತ್ತು ಹೆಚ್ಚು ಕರಗುವ ಬಿಂದು
(2) ಕಡಿಮೆ ರೋಧ ಮತ್ತು ಕಡಿಮೆ ಕರಗುವ ಬಿಂದು
(3) ಅಧಿಕ ರೋಧ ಮತ್ತು ಕಡಿಮೆ ಕರಗುವ ಬಿಂದು
(4) ಕಡಿಮೆ ರೋಧ ಮತ್ತು ಹೆಚ್ಚು ಕರಗುವ ಬಿಂದು

129. 'ಥರ್ಮೋಸೆಟ್ಟಿಂಗ್ ಪ್ಲಾಸ್ಟಿಕ್' ಗೆ ಉದಾಹರಣೆ

(1) ಪಾಲಿಥೀನ್
(2) ಪ್ರೊಪೈಲೀನ್
(3) ಸಿಲಿಕೋನ್
(4) ಪಾಲಿವಿನೈಲ್ ಕ್ಲೋರೈಡ್

130. ಫ್ಲಿಂಟ್ ಗಾಜು ತಯಾರಿಕೆಯಲ್ಲಿ 'ಸಿಲಿಕಾ' ಗೆ ಬೆರೆಸುವ ಕಚ್ಚಾ ವಸ್ತು

(1) ಕ್ಯಾಲ್ಸಿಯಂ ಆಕ್ಸೈಡ್
(2) ಸೀಸದ ಆಕ್ಸೈಡ್
(3) ಪೊಟ್ಯಾಷಿಯಂ ಕಾರ್ಬೋನೇಟ್
(4) ಬೋರಾನ್ ಮತ್ತು ಅಲ್ಯುಮಿನಾ

131. ಕ್ಯೂರಿಂಗ್ ಸಮಯದಲ್ಲಿ ನೀರನ್ನು ಹೀರಿಕೊಳ್ಳುವ ಸೀಮೆಂಟಿನ ಘಟಕಗಳು

(1) ಕ್ಯಾಲ್ಸಿಯಂ ಸಲ್ಫೇಟ್ ಮತ್ತು ಅಲ್ಯುಮಿನಿಯಂ ಸಿಲಿಕೇಟ್
(2) ಕ್ಯಾಲ್ಸಿಯಂ ಸಲ್ಫೇಟ್ ಮತ್ತು ಜಿಪ್ಸಂ
(3) ಕ್ಯಾಲ್ಸಿಯಂ ಮತ್ತು ಅಲ್ಯುಮಿನಿಯಂ ಸಿಲಿಕೇಟ್
(4) ಅಲ್ಯುಮಿನಿಯಂ ಸಿಲಿಕೇಟ್ ಮತ್ತು ಜಿಪ್ಸಂ

132. ಒಂದೇ ಗುಂಪಿಗೆ ಸೇರಿದ ಮೂಲ ವಸ್ತುಗಳು

(1) ಬೋರಾನ್, ಕಾರ್ಬನ್, ಅಲ್ಯುಮಿನಿಯಂ, ಹೀಲಿಯಂ
(2) ಹೈಡ್ರೋಜನ್, ಲೀಥಿಯಂ, ಬೆರೆಲಿಯಂ, ಬೋರಾನ್
(3) ಲೀಥಿಯಂ, ಕ್ಯಾಲ್ಸಿಯಂ, ಸೋಡಿಯಂ, ಪೊಟ್ಯಾಷಿಯಂ
(4) ಬೆರೆಲಿಯಂ, ಕ್ಯಾಲ್ಸಿಯಂ, ಮೆಗ್ನೇಷಿಯಂ, ಬೇರಿಯಂ

**(SPACE FOR ROUGH WORK)**



www.InyaTrust.com
Use E-Papers, Save Trees
above line hide when print out

**133.** ಸೆರಾಮಿಕ್ ವಸ್ತುಗಳನ್ನು ತಯಾರಿಸುವಾಗ ಉಂಟಾಗುವ ಬಿರುಕುಗಳನ್ನು ನಿವಾರಿಸಲು ಸೇರಿಸಲಾಗುವ ವಸ್ತುಗಳು

(1) ಫ್ಲಿಂಟ್ ಮತ್ತು ಸಿಲಿಕಾ
(2) ಫ್ಲಿಂಟ್ ಮತ್ತು ಗ್ಲಾಸ್ ಪೀಸ್
(3) ಫ್ಲಿಂಟ್ ಮತ್ತು ಕ್ವಾರ್ಟ್ಸ್
(4) ಫ್ಲಿಂಟ್ ಮತ್ತು ಕ್ಲೇ

**134.** 'ಸಿಲಿಕಾನ್'ನ ಎಲೆಕ್ಟ್ರಾನಿಕ್ ವಿನ್ಯಾಸ

(1) $1s^2, 2s^2, 2p^6, 3s^2, 3p^2$
(2) $1s^2, 2s^2, 2p^6, 3s^2, 3p^4$
(3) $1s^2, 2s^2, 2p^6, 3s^2, 3p^5$
(4) $1s^2, 2s^2, 2p^6, 3s^2, 3p^6, 3d^1$

**135.** ಸಾಬೂನೀಕರಣದಲ್ಲಿ ಕೊಬ್ಬು ಮತ್ತು ಎಣ್ಣೆಗಳನ್ನು ತಟಸ್ಥೀಕರಣಗೊಳಿಸಲು ಬಳಸುವುದು

(1) ಪೊಟ್ಯಾಷಿಯಂ ಹೈಡ್ರಾಕ್ಸೈಡ್
(2) ಪೊಟ್ಯಾಷಿಯಂ ಕ್ಲೋರೈಡ್
(3) ಪೊಟ್ಯಾಷಿಯಂ ಕ್ಲೋರೇಟ್
(4) ಪೊಟ್ಯಾಷಿಯಂ ನೈಟ್ರೇಟ್

**136.** ದುಗ್ಧರಸದಲ್ಲಿರುವುದು

(1) ಆರ್.ಬಿ.ಸಿ. ಮತ್ತು ಪ್ರೋಟೀನ್‌ಗಳು
(2) ಆರ್.ಬಿ.ಸಿ. ಮತ್ತು ಡಬ್ಲ್ಯೂ.ಬಿ.ಸಿ.
(3) ಡಬ್ಲ್ಯೂ.ಬಿ.ಸಿ. ಮತ್ತು ಪ್ರೋಟೀನ್‌ಗಳು
(4) ಆರ್.ಬಿ.ಸಿ. ಮಾತ್ರ

**137.** ಎರಡು ಮೂತ್ರ ಪಿಂಡಗಳ ಮೇಲೆ ಇರುವ ಗ್ರಂಥಿಗಳು

(1) ಥೈರಾಯಿಡ್ ಗ್ರಂಥಿಗಳು
(2) ಪ್ಯಾರಾಥೈರಾಯಿಡ್ ಗ್ರಂಥಿಗಳು
(3) ಅಡ್ರಿನಲ್ ಗ್ರಂಥಿಗಳು
(4) ಐಲೆಟ್ಸ್ ಆಫ್ ಲ್ಯಾಂಗರ್‌ಹಾನ್ಸ್

**138.** ಈ ಕೆಳಗಿನವುಗಳಲ್ಲಿ ಆಹಾರ ಮಿಶ್ರಕವಲ್ಲದ್ದು ?

(1) ಪ್ರತಿ ಉತ್ಕರ್ಷಕಗಳು
(2) ವರ್ಣಕಾರಕಗಳು
(3) ಪಾಲಿಪ್ಲಾಯಿಡ್‌ಗಳು
(4) ರುಚಿಕಾರಕಗಳು

**139.** ಈ ಕೆಳಗಿನವುಗಳಲ್ಲಿ 'ಅಂಗಾಂಶ'

(1) ನ್ಯೂರಾನ್
(2) ಗ್ರಾಹಕಗಳು
(3) ವಾಹಕಗಳು
(4) ಕಾರ್ಯನಿರ್ವಾಹಕಗಳು

**(SPACE FOR ROUGH WORK)**

www.InyaTrust.com



Use E-Papers, Save Trees
above line hide when print out

**140.** ಹಾರಲಾರದ ಪಕ್ಷಿಗಳ ಗುಂಪು

(1) ಕಿವಿ, ಆಸ್ಟ್ರಿಚ್, ಬಾತುಕೋಳಿ, ರಿಯಾ
(2) ಆಸ್ಟ್ರಿಚ್, ಕಿವಿ, ಎಮು, ನವಿಲು
(3) ಫ್ಲೆಮಿಂಗೋ, ಕಿವಿ, ಆಸ್ಟ್ರಿಚ್, ರಿಯಾ
(4) ಆಸ್ಟ್ರಿಚ್, ಕಿವಿ, ಎಮು, ರಿಯಾ

**141.** ರಾಜ್ಯಮಟ್ಟದ 'ನಾಡಗೀತೆ' ಹಾಡುವ ಸ್ಪರ್ಧೆಗೆ, ಹೆಣ್ಣು ಮಕ್ಕಳನ್ನು ಆಯ್ಕೆ ಮಾಡಲು ಶಾಲೆ ಹೆಚ್ಚಿನ ಪ್ರಾಶಸ್ತ್ಯ ನೀಡಿತು. ಇದು ಪ್ರತಿ ಫಲಿಸುವುದು

(1) ಮೌಲ್ಯೀಕರಿಸುವಿಕೆ
(2) ಲೋಕಾ ರೂಢಿ
(3) ಸ್ವಾಭಾವಿಕತೆ
(4) ಲಿಂಗ ತಾರತಮ್ಯ

**142.** ಶಾಲಾ ಹಂತದಲ್ಲಿ ಮೌಲ್ಯಾಂಕನದ ಪ್ರಾಥಮಿಕ ಮೂಲಾಧಾರದ ಅಂಶ

(1) ಮೌಲ್ಯಾಂಕನವು ಹೆಚ್ಚು ಭಾವನಾತ್ಮಕವಾಗಿರಬೇಕು
(2) ಯಾವುದೇ ವಿಧಾನದಲ್ಲಿಯಾದರೂ ಸರಿ, ಮಗು ಉತ್ತಮ ಅಂಕಗಳನ್ನೇ ಗಳಿಸಬೇಕು
(3) ಮಗುವಿನ ಕಲಿಕಾ ಸಾಮರ್ಥ್ಯಗಳು ಶಿಕ್ಷಕನಿಗೆ ಚೆನ್ನಾಗಿ ಗೊತ್ತಿರುತ್ತದೆ
(4) ಮೌಲ್ಯಾಂಕನವು ವ್ಯಕ್ತಿಗತವಾದದ್ದು

**143.** ಅನುಭವಾತ್ಮಕ ಕಲಿಕೆಯ ವಿವಿಧ ಅಂಶಗಳ ಕ್ರಮಾನುಗತ ಜೋಡಣೆಯ ಆಯ್ಕೆ

a. ಗುಂಪು ಅಥವಾ ವೈಯಕ್ತಿಕ ಚಟುವಟಿಕೆಗಳ ಮೂಲಕ ಚಿಂತನೆಗೆ ದಾರಿ ಮಾಡಿಕೊಡುವುದು
b. ಕಲಿಕೆಯನ್ನು ನಿರ್ದೇಶಿಸುವುದು
c. ಕಲಿಕೆಯನ್ನು ಅನುಕೂಲಿಸುವುದು
d. ಕಲಿಕೆಯನ್ನು ಕ್ರೋಢೀಕರಿಸುವುದು

(1) a c d b
(2) c a b d
(3) a c b d
(4) b c a d

**144.** 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವರುಣ್ ಎಂಬ ವಿದ್ಯಾರ್ಥಿ "ಸಾಲುಮರದ ತಿಮ್ಮಕ್ಕ" ರವರ ಹಾದಿಯಲ್ಲೇ ಸಾಗಲು ನಿರ್ಧರಿಸುತ್ತಾನೆ. ವರುಣನ ಈ ವರ್ತನೆ

(1) ಬುದ್ಧಿವಂತಿಕೆ
(2) ಭಾವನಾತ್ಮಕ
(3) ಮನೋಚಾಲನ
(4) ಪ್ರಶಂಸೆ

**(SPACE FOR ROUGH WORK)**

www.InyaTrust.com



Use E-Papers, Save Trees
above line hide when print out

145. ಯಾವ ಕಲಿಕಾಂಶವನ್ನು "ವೈಜ್ಞಾನಿಕ ವಿಚಾರಣಾ ಕ್ರಮದ" ಮೂಲಕ ಬೋಧಿಸಬಹುದು ?
(1) ಅಣುವಿನಲ್ಲಿ ಎಲೆಕ್ಟ್ರಾನುಗಳ ಜೋಡಣೆ
(2) ಕುಲುಮೆ ಕೆಲಸ ಮಾಡುವ ವಿಧಾನ
(3) ರಾಸಾಯನಿಕ ಕ್ರಿಯೆಗಳ ವಿಧಗಳು
(4) ಘನ ವಸ್ತುಗಳು, ದ್ರವಗಳಲ್ಲಿ ಮುಳುಗಿಸಿದಾಗ ಅವು ತೂಕ ಕಳೆದುಕೊಳ್ಳುತ್ತವೆ

146. ಅನುಗಮನ ಪದ್ಧತಿಯಲ್ಲಿ ವಿದ್ಯಾರ್ಥಿ ಬೆಳೆಸಿಕೊಳ್ಳುವ ಗುಣ
(1) ತಾರ್ಕಿಕ ಚಿಂತನೆ (2) ಸಮಸ್ಯೆ ಬಿಡಿಸುವಿಕೆ (3) ಪ್ರಶ್ನಿಸುವಿಕೆ (4) ವೈಜ್ಞಾನಿಕ ಚಿಂತನೆ

147. ಯಾವ ಹೇಳಿಕೆ ವೈಜ್ಞಾನಿಕ ವಿಧಾನದ ಬೋಧನಾಶಾಸ್ತ್ರಕ್ಕೆ ಸರಿಹೊಂದುತ್ತದೆ ?
(1) ವಿದ್ಯಾರ್ಥಿಗಳು ಸ್ವತಂತ್ರನಾಗಿ ಕಾರಣ ಹುಡುಕಬೇಕಿಲ್ಲ
(2) ಶಾಲೆಯ ಹೊರಗಿನ ಕಲಿಕೆ ಗಣನೀಯವಲ್ಲ
(3) ಮಗುವಿನ ಅರ್ಥಗ್ರಹಿಕೆ ಸಮಂಜಸವಾದುದು
(4) ತರಗತಿ ಪ್ರಕ್ರಿಯೆಯನ್ನು ಶಿಕ್ಷಕರೇ ಮುನ್ನಡೆಸಬೇಕು

148. "ಎಡ್ಗರ್ ಡೇಲ್‌ನ ಕಲಿಕಾ ಅನುಭವದ ಶಂಕು" ವಿನಲ್ಲಿ ಕಲಿಕಾ ಅನುಭವಗಳು ಚಲಿಸುವುದು
(1) ಸರಳತೆಯಿಂದ ಸಂಕೀರ್ಣತೆಯೆಡೆಗೆ (2) ಗೊತ್ತಿರುವುದರಿಂದ ಗೊತ್ತಿಲ್ಲದ ಕಡೆಗೆ
(3) ಸಾಮಾನ್ಯೀಕರಣದಿಂದ ನಿರ್ದಿಷ್ಟತೆಯೆಡೆಗೆ (4) ಮೂರ್ತತೆಯಿಂದ ಅಮೂರ್ತತೆಯೆಡೆಗೆ

149. ರವೆಯಲ್ಲಿ ಮಿಶ್ರಣಗೊಂಡಿರುವ ಕಬ್ಬಿಣದ ರಜಗಳನ್ನು ತೆಗೆಯಲು ಅಮ್ಮನಿಗೆ ನೆರವಾಗುವ ಅರುಣಳು ಆಯಸ್ಕಾಂತ ಉಪಯೋಗಿಸಿದಳು. ಅರುಣಳ ಈ ಚಟುವಟಿಕೆಯ ವಲಯ
(1) ಬೌದ್ಧಿಕ (2) ಜ್ಞಾನಾತ್ಮಕ (3) ಮನೋವೈಜ್ಞಾನಿಕ (4) ಭಾವನಾತ್ಮಕ

150. ಖಗೋಳ ವಿಜ್ಞಾನದ ಸಂಶೋಧನೆಗಾಗಿ ನೊಬೆಲ್ ಪ್ರಶಸ್ತಿ ಪಡೆದ ಭಾರತದ ವಿಜ್ಞಾನಿ ಹೆಸರು
(1) ಸರ್ ಸಿ.ವಿ. ರಾಮನ್ (2) ಸತ್ಯೇಂದ್ರನಾಥ್ ಬೋಸ್
(3) ಹರ್‌ಗೋವಿಂದ ಖೊರಾನಾ (4) ಸುಬ್ರಹ್ಮಣ್ಯಂ ಚಂದ್ರಶೇಖರ್

(SPACE FOR ROUGH WORK)



www.InyaTrust.com
Use E-Papers, Save Trees
above line hide when print out